2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

ಸತ್ರ ಮೊಕದ್ದಮೆ ನಂಃ 154/2019

| | | |
|---|---|---|
| ಸಾಕ್ಷಿದಾರರ ಹೆಸರು | - ಎಂ ಡಿ ಪ್ರಕಾಶ್ | ಪಿಡಬ್ಲೂ - 4 |
| ತಂದೆಯ ಹೆಸರು | - ದುಗ್ಗಪ್ಪಗೌಡ | ಸಿಡಬ್ಲೂ -4 |
| ವಯಸ್ಸು | - 48 ವರ್ಷ | |
| ಉದ್ಯೋಗ | - ವ್ಯವಸಾಯ | |
| ವಾಸ ಸ್ಥಳ | - ಮುತ್ತಿನಕೊಪ್ಪ | |

ದಿನಾಂಕಃ 19.10.2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-

1. ಆರೋಪಿತರು ಗೊತ್ತು. ಫ್ರಾಸಾ.1, ಫ್ರಾಸಾ.3, ಚಾಸಾ.5 ರಿಂದ ಚಾಸಾ.12 ರವರು ಗೊತ್ತು. ಅವರು ನಮ್ಮ ಊರಿನವರು. ಫ್ರಾಸಾ.2 ಗೊತ್ತು, ಆಕೆ ಆರೋಪಿತರ ಮಗಳು.

2. ಆರೋಪಿತರು ಮೂಲತಃ ಕೇರಳದವರು. ಘಟನೆಯ 2 ವರ್ಷಗಳ ಹಿಂದೆ ಅವರು ಮುತ್ತಿನಕೊಪ್ಪಕ್ಕೆ ಬಂದು ವಾಸವಾಗಿದ್ದರು. ಘಟನೆಯ 6 ತಿಂಗಳ ಹಿಂದೆ ಆರೋಪಿತರು ಫ್ರಾಸಾ.3 ರವರಿಗೆ ಸೇರಿದ ಕಟ್ಟಡದಲ್ಲಿರುವ ಒಂದು ಮಳಿಗೆಯಲ್ಲಿ ಕ್ಯಾಂಟೀನನ್ನು ನಡೆಸುತ್ತಿದ್ದರು. ಆರೋಪಿತರಿಗೆ ಒಂದು ಗಂಡು ಮತ್ತು ಒಂದು ಹೆಣ್ಣು ಮಗುವಿದೆ.

3. ದಿನಾಂಕ 18.06.2019 ರಂದು ಸಂಜೆ 6.30 ಗಂಟೆ ಸಮಯದಲ್ಲಿ ನಾನು ಫ್ರಾಸಾ.3 ರವರ ಕಟ್ಟಡದಿಂದ ಸುಮಾರು 50 ಅಡಿ ದೂರದಲ್ಲಿ ಇದ್ದೆನು. ಆಗ ನನ್ನೊಂದಿಗೆ ಚಾಸಾ.10 ಪ್ರಸನ್ನ, ಚಾಸಾ.11 ಶ್ರೀನಿವಾಸ, ಚಾಸಾ.5 ಮೊಹಮ್ಮದ್ ಅನ್ಸರ್, ಚಾಸಾ.8 ರಿಯಾಜ್, ಚಾಸಾ.9 ಅಕ್ಮಲ್, ಫ್ರಾಸಾ.1 ಪೌಲಸ್,

ವಾಜೀದ್ ಮತ್ತು ಇನ್ನೊಬ್ಬರು ಇದ್ದರು. ಆಗ ಫ್ರಾಸಾ.3 ರವರು ತಮ್ಮ ಕಟ್ಟಡದ ಪಕ್ಕದಲ್ಲಿರುವ ಅವರಿಗೆ ಸೇರಿದ ಖಾಲಿ ಜಾಗದಲ್ಲಿ ಕೆಲಸ ಮಾಡಿಸುತ್ತಿದ್ದರು. ಆಗ ಆರೋಪಿತರು ಅಲ್ಲಿಗೆ ಹೋಗಿ ಫ್ರಾಸಾ.3 ರವರೊಂದಿಗೆ ಸದರಿ ಜಾಗದ ಬಗ್ಗೆ ಫ್ರಾಸಾ.3 ರವರ ಕೊರಳಪಟ್ಟಿಯನ್ನು ಹಿಡಿದುಕೊಂಡು ಸೂಳೆ ಮಗ, ಬೋಳಿ ಮಗ ಎಂದು ಕೆಟ್ಟ ಪದಗಳಿಂದ ಬೈದರು. ಆಗ ಫ್ರಾಸಾ.3 ರವರು ನ.ರಾ.ಪುರ ಪೊಲೀಸ್ ಠಾಣೆಗೆ ಫೋನ್ ಮಾಡಿದರು. ಆಗ 2 ನೆ ಆರೋಪಿ ನನಗೆ ಹೊಡೆತ ಬಿದ್ದಿದೆ ಆಸ್ಪತ್ರೆಗೆ ಹೋಗಿ ಫ್ರಾಸಾ.3 ರವರ ವಿರುದ್ಧ ದೂರನ್ನು ಕೊಡುತ್ತೇನೆ ಎಂದು ಹೇಳಿ ಅಲ್ಲಿಂದ ಹೋದರು. ಸಂಜೆ 6.45 ಗಂಟೆಗೆ ನ.ರಾ.ಪುರ ಪೊಲೀಸ್ ಠಾಣೆಯ ಮಂಜುನಾಥ್ ರವರು ಅಲ್ಲಿಗೆ ಬಂದರು. ಆ ದಿನ ಫ್ರಾಸಾ.3 ರವರು ಕೆಲಸ ಮಾಡಿಸುತ್ತಿದ್ದ ಸ್ಥಳದ ಬಗ್ಗೆ ತಡೆಯಾಜ್ಞೆ ಇದೆ ಎಂದು ಹೇಳಿ 1 ನೇ ಆರೋಪಿ ಸದರಿ ಪೊಲೀಸರಿಗೆ ಕೆಲವು ದಾಖಲೆಗಳನ್ನು ತೋರಿಸುತ್ತಿದ್ದರು. ಸದರಿ ದಾಖಲೆಗಳನ್ನು ಮಂಜುನಾಥ್ ಪೊಲೀಸರವರು ನೋಡುತ್ತಿದ್ದ ಸಮಯದಲ್ಲಿ 1 ನೇ ಆರೋಪಿ ತಮ್ಮ ಕ್ಯಾಂಟೀನ್ ನ ಒಳಗೆ ಹೋಗಿ ತಮ್ಮ ಇಬ್ಬರು ಮಕ್ಕಳನ್ನು ಹೊರಗೆ ಎಳೆದುಕೊಂಡು ಕೈಯಲ್ಲಿ ಚಾಕುವನ್ನು ಹಿಡಿದುಕೊಂಡು ಬಂದರು.

4. ನಂತರ 1 ನೇ ಆರೋಪಿ ಫ್ರಾಸಾ.3 ರವರನ್ನು ಕುರಿತು ತನ್ನ ಮಕ್ಕಳನ್ನು ಸಾಯಿಸಿ ತಾನು ಆತ್ಮಹತ್ಯೆ ಮಾಡಿಕೊಂಡು ನಿನಗೆ ಶಿಕ್ಷೆ ಕೊಡಿಸುತ್ತೇನೆ ಎಂದು ಹೇಳಿ ಕೂಗಾಡುತ್ತಾ ತನ್ನ ಕೈಯಲ್ಲಿದ್ದ ಚಾಕುವಿನಿಂದ ತನ್ನ ಮಗಳಾದ ಫ್ರಾಸಾ.2 ರವರ ಕುತ್ತಿಗೆಯ ಬಲಭಾಗಕ್ಕೆ ಕುಯ್ದರು. ಆಗ ಫ್ರಾಸಾ.2 ರವರಿಗೆ ಆ ಭಾಗದಲ್ಲಿ ಗಾಯವಾಗಿ ರಕ್ತ ಬಂದಿತು. ನಂತರ 1 ನೇ ಆರೋಪಿ ಸದರಿ

ಚಾಕುವಿನಿಂದ ತನ್ನ ಎಡಗೈಯನ್ನು ಕುಯ್ದುಕೊಂಡಳು. ನಂತರ ಪ್ರಾಸಾ.1 ರವರು ಹೋಗಿ 1 ನೇ ಆರೋಪಿಯನ್ನು ಹಿಡಿದುಕೊಂಡರು. ನಂತರ ಪೊಲೀಸ್ ಮಂಜುನಾಥ್ ರವರು ಹೋಗಿ 1 ನೇ ಆರೋಪಿಯ ಕೈಯಲ್ಲಿದ್ದ ಚಾಕುವನ್ನು ಕಿತ್ತುಕೊಂಡರು. ಆ ಸಮಯದಲ್ಲಿ ಪೊಲೀಸ್ ಮಂಜುನಾಥ್ ರವರ ಕಿರುಬೆರಳಿಗೂ ಸಹ ಗಾಯವಾಯಿತು.

5. ನಂತರ ಚಾಸಾ.6 ವಾಜೀದ್ ರವರು ಗಾಯಗೊಂಡಿದ್ದ ಪ್ರಾಸಾ.2 ರವರನ್ನು ಮುತ್ತಿನಕೊಪ್ಪ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋದರು. ನಂತರ ಪ್ರಾಸಾ.3 ರವರು ಆ ಬಗ್ಗೆ ಆರೋಪಿತರ ವಿರುದ್ಧ ಪೊಲೀಸರಿಗೆ ದೂರು ಕೊಟ್ಟ ವಿಚಾರ ತಿಳಿಯಿತು.

6. ಮಾರನೇ ದಿನ ಅಂದರೆ ದಿನಾಂಕ 19.06.2019 ರಂದು ನ.ರಾ.ಪುರ ಪೊಲೀಸರು ನನ್ನನ್ನು ಮತ್ತು ಚಾಸಾ.5 ರವರನ್ನು ತಮ್ಮ ಠಾಣೆಗೆ ಹಿಂದಿನ ದಿನ ನಡೆದಿದ್ದ ಘಟನೆಯಲ್ಲಿ 1 ನೇ ಆರೋಪಿ ಉಪಯೋಗಿಸಿದ್ದ ಚಾಕುವಿನ ಬಗ್ಗೆ ಮಹಜರ್ ಮಾಡಲು ಕರೆಸಿದ್ದರು. ಅಲ್ಲಿ ನಮ್ಮ ಸಮಕ್ಷಮ ಚಾಸಾ.19 ಮಂಜುನಾಥ್ ಪೊಲೀಸ್ ರವರು ಸದರಿ ಚಾಕುವನ್ನು ತನಿಖಾಧಿಕಾರಿಗಳಿಗೆ ಹಾಜರುಪಡಿಸಿದರು. ನಾನು ಸದರಿ ಚಾಕುವನ್ನು ಘಟನಾ ಸಮಯದಲ್ಲಿ 1 ನೇ ಆರೋಪಿ ಕೃತ್ಯಕ್ಕೆ ಬಳಸಿದ್ದನ್ನು ನೋಡಿದ್ದೆನು. ಸದರಿ ಚಾಕು ಮರದ ಹಿಡಿಯಿರುವ ಕಬ್ಬಿಣದ ಚಾಕು ಆಗಿತ್ತು.

7. ಸದರಿ ಚಾಕುವನ್ನು ಪೊಲೀಸರು ಬೆಳಿಗ್ಗೆ 8.00 ಗಂಟೆಯಿಂದ 8.30 ಗಂಟೆಯವರೆಗೆ ಮಹಜರ್ ಮಾಡಿ ಅದಕ್ಕೆ ನನ್ನ

ಸಹಿಯನ್ನು ಪಡೆದು ತಮ್ಮ ವಶಕ್ಕೆ ತೆಗೆದುಕೊಂಡರು. ಸದರಿ ಚಾಕುವಿನ ಮೇಲೆ ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿದರು. ನಂತರ ಸದರಿ ಪಂಚನಾಮೆ ಮತ್ತು ಚಾಕುವಿನ ಮೇಲೆ ಅಂಟಿಸಿದ ಚೀಟಿಗೆ ಚಾಸಾ.5 ರವರು ಸಹಿ ಮಾಡಿದ್ದಾರೆ.

8. ಸದರಿ ಪಂಚನಾಮೆಯನ್ನು ಮತ್ತು ಚಾಕುವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಪಂಚನಾಮೆ ಮತ್ತು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ನಿಪಿ.5 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.5(ಎ) ಎಂದು ಗುರುತಿಸಲಾಯಿತು.

9. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿ ಸದರಿ ದಾಖಲೆಯು ನೋಟೀಸಾಗಿದ್ದು ಅದಕ್ಕೆ ಮೇಲೆ ಹೇಳಿದಂತೆ ಪೊಲೀಸರು ಮಹಜರ್ ಮಾಡಲು ನಮ್ಮನ್ನು ಕರೆಸಿದ್ದಾಗ ನನ್ನ ಸಹಿಯನ್ನು ಪಡೆದುಕೊಂಡಿದ್ದಾಗಿ ನುಡಿದಿರುತ್ತಾರೆ. ಸದರಿ ನೋಟೀಸನ್ನು ನಿಪಿ.6 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

10. ಸಾಕ್ಷಿಯು ಈಗಾಗಲೇ ಮು.ಮಾ.1 ಎಂದು ಗುರುತಿಸಲ್ಪಟ್ಟಿರುವ ಚಾಕುವನ್ನು ಮತ್ತು ಅದರ ಮೇಲೆ ಅಂಟಿಸಲಾಗಿರುವ ಚೀಟಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಮು.ಮಾ.1(ಎ) ಎಂದು ಗುರುತಿಸಲಾಯಿತು.

11. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಅದರಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿ ಅದನ್ನು ಮೇಲೆ

ಹೇಳಿದಂತೆ ಪೊಲೀಸರು ಮಹಜರ್ ಮಾಡಿ ಚಾಕುವನ್ನು ವಶಪಡಿಸಿಕೊಳ್ಳುವ ಸಮಯದಲ್ಲಿ ತೆಗೆದುಕೊಂಡಿರುವುದಾಗಿ ನುಡಿದಿರುತ್ತಾರೆ. ಸದರಿ ಫೋಟೋವನ್ನು ನಿಪಿ.7 ಎಂದು ಗುರುತಿಸಲಾಯಿತು. ಸದರಿ ಫೋಟೋದಲ್ಲಿ ನನ್ನೊಂದಿಗೆ ಪೊಲೀಸರು ಮತ್ತು ಚಾಸಾ.5 ರವರು ಇದ್ದಾರೆ. ಆ ದಿನ ಮಹಜರ್ ಗೆಂದು ಹೋಗಿದ್ದಾಗ ಪೊಲೀಸರು ಘಟನೆಯ ಬಗ್ಗೆ ನನ್ನನ್ನು ವಿಚಾರಿಸಿದರು. ಆಗ ನಾನು ಅವರಿಗೆ ಮೇಲಿನ ವಿಚಾರಗಳನ್ನು ತಿಳಿಸಿ ಹೇಳಿಕೆಯನ್ನು ನೀಡಿದ್ದೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿತರು ಈ ದಿನ ಗೈರು ಹಾಜರಿದ್ದು ಅವರ ಗುರುತಿಸುವಿಕೆಯ ಬಗ್ಗೆ ಯಾವುದೇ ತಕರಾರು ಇಲ್ಲವಂದು ಆರೋಪಿತರ ಪರ ವಕೀಲರು ಸಲ್ಲಿಸಿರುವ ವಿನಾಯಿತಿ ಅರ್ಜಿಯಲ್ಲಿ ತಿಳಿಸಿರುತ್ತಾರೆ.

**(**ಪಾಟೀ ಸವಾಲು**:** ಆರೋಪಿತರ ಪರ ವಕೀಲರು ಪ್ರತ್ಯಕ್ಷ ಸಾಕ್ಷಿದಾರರು ಎಂದು ಅಂತಿಮ ವರದಿಯಲ್ಲಿ ನಮೂದಿಸಿರುವ ಸಾಕ್ಷಿದಾರರ ವಿಚಾರಣೆಯಾಗುವವರೆಗೆ ಪ್ರಸ್ತುತ ಸಾಕ್ಷಿಯ ಪಾಟೀ ಸವಾಲಿಗೆ ಸಮಯಾವಕಾಶ ಕೋರಿ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು ಈ ಹಿಂದೆ ಪುರಸ್ಕರಿಸಿರುವ ಕಾರಣ ಸಾಕ್ಷಿಯ ಪಾಟೀ ಸವಾಲನ್ನು ಮುಂದೂಡಲಾಯಿತು**.)**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-
(ಭಾನುಮತಿ ಬಿ.ಸಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ

ಹೆಚ್